ಸೆಲೆಬ್ರಿಟಿ

■ ಹನಿ



## ಅಂಡರ್‌ವೇರ್ ಕಿರೀಟ!

ಫ್ಯಾಶನ್ ಲೋಕದಲ್ಲಿ ನೂರೆಂಟು ಪ್ರಶಸ್ತಿಗಳಿವೆ. ಆಕರ್ಷಕ ಮುಖ, ಸೆಕ್ಸೀ ದೇಹ, ಮನಸೆಳೆವ ಕಣ್ಣು, ಸೊಂಪಾದ ಕೂದಲು, ಸೆಕ್ಸೀ ಕಾಲುಗಳ ಸುಂದರಿ, ಮಿಸ್ ವರ್ಲ್ಡ್, ಮಿಸ್ ಗರ್ಭಿಣಿ, ಮಿಸ್ ಟೀನ್, ಮಿಸ್ ಬಿಕಿನಿ– ಹೀಗೆ ಒಂದೊಂದು ಅಂಗಕ್ಕೂ ಒಂದೊಂದು ಪ್ರಶಸ್ತಿ! ಈ ಹುಚ್ಚಾಟದ ಸ್ಪರ್ಧೆಗಳು (ಗರ್ಭಿಣಿಯಾಗೋದು ಒಂದನ್ನು ಬಿಟ್ಟು) ಪುರುಷರಿಗೂ ಇರುತ್ತವೆ. ವಿಶ್ವಖ್ಯಾತಿಯ ಫುಟ್‌ಬಾಲ್ ಆಟಗಾರ, ಇಂಗ್ಲೆಂಡ್ ತಂಡದ ಮಾಜಿ ನಾಯಕ ಡೇವಿಡ್ ಬೆಕ್ಹಾಮ್‌ಗೆ ಈಗ 'ಈ ಶತಮಾನದ ಅತ್ಯುತ್ತಮ ಅಂಡರ್‌ವೇರ್ ಮಾಡೆಲ್' ಎಂಬ ಬಿರುದು ಸಿಕ್ಕಿರುವುದೇ ಇದಕ್ಕೆ ಸಾಕ್ಷಿ. ಬೆಕ್ಹಾಮ್ ಮತ್ತು ಆತನ ಪತ್ನಿ (ಸ್ಪೈಸ್ ಗರ್ಲ್ ಖ್ಯಾತಿಯ) ವಿಕ್ಟೋರಿಯಾ ಇಬ್ಬರೂ ಈಗ ಫ್ಯಾಶನ್ ಲೋಕದ ಜನಪ್ರಿಯ ಜೋಡಿ. ಆದರೆ ಒಳಚಡ್ಡಿ ಧರಿಸಿ ಮಾಡೆಲಿಂಗ್ ಮಾಡುವ ಬೆಕ್ಹಾಮ್, ರ್‍ಯಾಂಪ್‌ನಲ್ಲಿ ಹೆಂಡತಿಗಿಂತ ಹೆಚ್ಚು ಜನಪ್ರಿಯನಂತೆ.

'ಫ್ಯಾಶನ್ ಲೋಕದಲ್ಲಿ ದೊಡ್ಡ ಹೆಸರು ಬಂದಿರುವುದು ನಿಜ. ಆದರೆ ನನ್ನ ನಾಲ್ಕು ಮಕ್ಕಳೂ ಒಳಚಡ್ಡಿಯಲ್ಲಿ ನಾನು ರ್‍ಯಾಂಪ್ ಮೇಲೆ ನಡೆಯುವುದನ್ನು ನೋಡಲು ಬಯಸುವುದಿಲ್ಲ. ಅವರಿಗೆ ಇದು ಬಹಳ ಮುಜುಗರ ತರುವ ಸಂಗತಿಯಾಗಿದೆ' ಎಂದು ಸ್ವತಃ ಬೆಕ್ಹಾಮ್ ಬಹಿರಂಗಪಡಿಸಿದ್ದಾನೆ.

ಇಂಗ್ಲೆಂಡ್ ತಂಡದಿಂದ ಬೆಕ್ಹಾಮ್ ನಿವೃತ್ತಿಯಾಗಿ ವರ್ಷವಾಯಿತು. ಆದರೆ ಆತನ ಜನಪ್ರಿಯತೆ ಮತ್ತು ಆದಾಯ ಏರುತ್ತಲೇ ಇದೆ. ಇತ್ತೀಚೆಗಷ್ಟೇ ಲಂಡನ್ನಿನಲ್ಲಿ ಇದ್ದ ಅತಿದೊಡ್ಡ ಎಸ್ಟೇಟ್ ಬಂಗಲೆಯನ್ನು ಬೆಕ್ಹಾಮ್–ವಿಕ್ಟೋರಿಯಾ ಜೋಡಿ, 11.3 ದಶಲಕ್ಷ ಪೌಂಡ್‌ಗೆ ಮಾರಾಟ ಮಾಡಿದೆ. ಸುಮಾರು 17 ಎಕರೆ ವಿಸ್ತೀರ್ಣದ 'ಕಂಟ್ರಿ ಮ್ಯಾನ್ಶನ್' ಎಂಬ ಈ ಸೂಪರ್ ಎಸ್ಟೇಟ್‌ಅನ್ನು ವಿಮಾ ಉದ್ಯಮಿ ನೀಲ್ ಅಟ್ಲೀ ದಂಪತಿ ಖರೀದಿಸಿದ್ದಾರೆ. 'ಮಿನಿ ಬಂಕಿಂಗ್‌ಹ್ಯಾಮ್ ಪ್ಯಾಲೇಸ್' ಎಂದೇ ಹೆಸರಿದ್ದ ಈ ಎಸ್ಟೇಟ್‌ನಲ್ಲಿ ರೆಕಾರ್ಡಿಂಗ್ ಸ್ಟುಡಿಯೊ, ಒಳಾಂಗಣ ಸ್ವಿಮಿಂಗ್ ಪೂಲ್, ಸ್ನೂಕರ್ ರೂಮ್, ಜಿಮ್, ವಿಶಾಲ ಗಾರ್ಡನ್ ಅಲ್ಲದೆ, ಒಂದು ಫುಟ್‌ಬಾಲ್ ಪಿಚ್ ಕೂಡಾ ಇದೆ. 5 ವರ್ಷಗಳ ಹಿಂದೆಯೇ ಬೆಕ್ಹಾಮ್ ತನ್ನ ವಾಸವನ್ನು ಅಮೆರಿಕಕ್ಕೆ ಬದಲಾಯಿಸಿಕೊಂಡಿರುವ ಹಿನ್ನೆಲೆಯಲ್ಲಿ ಲಂಡನ್ನಿನ ಈ ಆಸ್ತಿ ಮಾರಾಟ ಮಾಡಿದ್ದಾನೆ. ಆದರೆ ಖರೀದಿಸಿದ ಅಟ್ಲೀ ಅದನ್ನು ರಿಯಲ್ ಎಸ್ಟೇಟ್‌ನವರಿಗೆ ಮಾರಾಟ ಮಾಡದೆ ಹಾಗೆಯೇ ಉಳಿಸಿಕೊಳ್ಳಬೇಕೆಂಬ ಷರತ್ತೂ ಹಾಕಿದ್ದಾನೆ. ಈಗಲೂ ಫುಟ್‌ಬಾಲ್ ಪ್ರೇಕ್ಷಕರ ಆರಾಧ್ಯನಾಗಿರುವ ಬೆಕ್ಹಾಮ್, ಫ್ಯಾಶನ್ ಲೋಕದಲ್ಲೂ ಮಿಂಚಲು ಆತನ ಸ್ವಂತ ಬ್ರ್ಯಾಂಡ್‌ನ ಅಂಡರ್‌ವೇರ್‌ಗಳೂ ಕಾರಣವಾಗಿವೆ.

## ತಾರಾ ರಾಜಕೀಯ

ತೆಲುಗು ಸಿನಿಮಾ ರಂಗದ ಜನಪ್ರಿಯ ತಾರೆ ಪವನ್ ಕಲ್ಯಾಣ್ ಹೊಸ ಜನಸೇನಾ ಪಕ್ಷ ಕಟ್ಟಿದ್ದಾನೆ. ಅಣ್ಣ ಚಿರಂಜೀವಿ ಕಾಂಗ್ರೆಸ್‌ನಲ್ಲಿ ಕೇಂದ್ರ ಸಚಿವ–ತಮ್ಮ ಪವನ್ ಕಲ್ಯಾಣ್ ಆಂಧ್ರದಲ್ಲಿ ಕಡು ಕಾಂಗ್ರೆಸ್ ವಿರೋಧಿ! 'ಅಣ್ಣನ ಬಗ್ಗೆ ನನಗೆ ಸಿಟ್ಟಿಲ್ಲ. ಆತ ನನಗೆ ತಂದೆ ಇದ್ದಂತೆ. ಆದರೆ ದೆಹಲಿಯಲ್ಲಿ ಕುಳಿತಿರುವ ಕಾಂಗ್ರೆಸ್ ಮುಖಂಡರು ಆಂಧ್ರಪ್ರದೇಶವನ್ನು ಒಡೆದು ದುಸ್ಥಿತಿಗೆ ದೂಡಿದ್ದಾರೆ. ಅವರದ್ದೇ ತಪ್ಪು. ಕಾಂಗ್ರೆಸ್ ನಿರ್ನಾಮವೇ ನನ್ನ ಗುರಿ' ಎಂದು ಭೀಕರ ಭಾಷಣ ಮಾಡಿರುವ ಪವನ್, ಕೂಡಲೇ ಬಿಜೆಪಿಯ ಪ್ರಧಾನಿ ಅಭ್ಯರ್ಥಿ ನರೇಂದ್ರ ಮೋದಿಯವರನ್ನು ಭೇಟಿಯಾಗಿ ಬೆಂಬಲ ಘೋಷಿಸಿದ್ದೂ ಆಗಿದೆ. ಜತೆಗೆ ಚಂದ್ರಬಾಬು ನಾಯ್ಡು ಅವರ ತೆಲುಗುದೇಶಂ ಜತೆ ಮೈತ್ರಿ ಮಾತುಕತೆಯೂ ನಡೆದಿದೆ!



ಅಣ್ಣ ಚಿರಂಜೀವಿ ಪ್ರಜಾರಾಜ್ಯಂ ಪಕ್ಷ ಕಟ್ಟಿದಾಗ, ಪವನ್ ಕಲ್ಯಾಣ್ ಆ ಪಕ್ಷಕ್ಕೆ ಬಹುದೊಡ್ಡ ತಾರಾ ಆಕರ್ಷಣೆಯಾಗಿದ್ದ. ಆದರೆ ಈಗ ಸ್ವತಂತ್ರ ಪಕ್ಷ ಕಟ್ಟಿ ಉಳಿಯುವುದು ಸಾಧ್ಯವಿದೆಯೆ? 'ಇಬ್ಬರು ಮಡದಿಯರನ್ನು ಬಾಳಿಸಲಾಗದೆ ಡೈವೋರ್ಸ್ ಕೊಟ್ಟು ರಶ್ಯಾದ ಅನ್ನಾ ಲೆಜ್ನೆವಾಳನ್ನು ಮದುವೆಯಾಗಿರುವ ಈತ ರಾಜ್ಯವನ್ನು ಹೇಗೆ ಬಾಳಿಸಬಲ್ಲ?' ಎಂದು ಈಗಾಗಲೆ ಕಾಂಗ್ರೆಸ್ ಮುಖಂಡರು ಕಿಡಿ ಹಾರಿಸಿದ್ದಾರೆ. 'ನನ್ನ ವೈಯಕ್ತಿಕ ವಿಷಯಕ್ಕೆ ಬಂದರೆ ನಿಮ್ಮದನ್ನೂ ಯೂಟ್ಯೂಬ್‌ನಲ್ಲಿ ಹಾಕುತ್ತೇನೆ' ಎಂದು ಪವನ್ ಮರುಬೆದರಿಕೆ ಹಾಕಿದ್ದೂ ಆಗಿದೆ! ಇದು ಆಂಧ್ರದ ರಾಜಕೀಯ ಯಾವ ದಿಕ್ಕಿಗೆ ಸಾಗುತ್ತಿದೆ ಎನ್ನುವುದರ ಮುನ್ಸೂಚನೆಯೂ ಇರಬಹುದು.

ಪವನ್‌ಗೆ ಬೆಂಬಲಿಗರ ಸಂಖ್ಯೆ ದೊಡ್ಡದಿದೆ. ಹಲವು ಚಿತ್ರಗಳು ಹಿಟ್ ಆಗಿವೆ. ಗಬ್ಬರ್ ಸಿಂಗ್ ಎಂಬ ಚಿತ್ರವಂತೂ 150 ಕೋಟಿ ರೂಪಾಯಿ ಕಲೆಕ್ಷನ್ ಮಾಡಿ ದಾಖಲೆ ನಿರ್ಮಿಸಿದ ಕರಾಟೆ ಬ್ಲ್ಯಾಕ್ ಬೆಲ್ಟ್ ವಿಜೇತ ಈ ನಟ, ಚಿತ್ರಕಥೆ ಬರವಣಿಗೆ, ನಿರ್ದೇಶನ, ಕೊರಿಯೋಗ್ರಫಿ, ಹಿನ್ನೆಲೆ ಗಾಯನ, ಸ್ಟಂಟ್ಸ್ ಮಾರ್ಗದರ್ಶನ– ಹೀಗೆ ಸಕಲಕಲಾ ವಲ್ಲಭ! ರಾಜಕೀಯವೂ ಬರೀ ಸ್ಟಂಟ್ ಆಗದಿದ್ದರೆ ಸಾಕು! ■

Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@sudha.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65